ದಿ: **1.7.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಮೇಲ್ಮವಿದಾರರ ಪರ ಶ್ರೀ ಆರ್ ವಿ ವಕೀಲರಿಂದಃ**

ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ನಾನು ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ತಾಲ್ಲೂಕು ಜೆ ಬಿ ಹಳ್ಳಿ ಗ್ರಾಮದ ಖಾಯಂ ನಿವಾಸಿ ಎಂದು ತೋರಿಸಲು ದಾಖಲೆ ಹಾಜರು ಮಾಡಿಲ್ಲ. ಅಸಲು ದಾವೆ 35/2013 ರ ನಡವಳಿಕೆಗಳ ಬಗ್ಗೆ ಮತ್ತು ತೀರ್ಪಿನ ಬಗ್ಗೆ ಮೇಲ್ಮನವಿದಾರರ ಗಮನದಲ್ಲಿ ಇತ್ತು ಎಂದು ತೋರಿಸಲು ದಾಖಲೆಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಒಟ್ಟು 8 ಎಕರೆ 94 ಸೆಂಟ್ಸ್ ಜಾಗಕ್ಕೆ ಸಂಬಂಧಪಟ್ಟಂತೆ 360 ಜನರ ವಿರುದ್ಧ 65 ದಾವೆಗಳನ್ನು ಸಲ್ಲಿಸಿದ್ದೆ ಎಂದರೆ ಸರಿ. ಅವುಗಳ ಪೈಕಿ ಇನ್ನೂ 14 ದಾವೆಗಳು ಸಂಡೂರು ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿವೆ ಎಂದರೆ ಸರಿ.

ಮಾನ್ಯ ಸಂಡೂರು ನ್ಯಾಯಾಲಯದಲ್ಲಿ ಆಗಿದ ತೀರ್ಪುಗಳ ವಿರುದ್ಧ ಜಿಲ್ಲಾ ನ್ಯಾಯಾಲಯದಲ್ಲಿ ಸಲ್ಲಿಸಿದ ಮೇಲ್ಮನವಿಗಳ ಪೈಕಿ 29 ಮೇಲ್ಮನವಿಗಳು ಇತ್ಯರ್ಥ ಆಗಿವೆ ಎಂದರೆ ಸರಿ. ಸದರಿ ತೀರ್ಪಿನ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ ಮೇಲ್ಮನವಿಗಳಲ್ಲಿ ತಡೆಯಾಜ್ಞೆ ಇದೆ ಎಂದರೆ 25 ಪ್ರಕರಣಗಳಲ್ಲಿ ತಡೆಯಾಜ್ಞೆ ಇದೆ. ಸರಕಾರದವರೂ ಸಹ ನನ್ನ ವಿರುದ್ಧ ಮೇಲ್ಮನವಿಗಳನ್ನು ಸಲ್ಲಿಸಿದ್ದಾರೆ ಎಂದರೆ ಸರಿ.

ಆರ್ಥಿಕವಾಗಿ ಸಬಲರು ಅಲ್ಲದೇ ಇರುವ ವ್ಯಕ್ತಿಗಳು ಜಾಗದಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸುಮಾರು 50 ವರ್ಷಗಳಿಂದ ಅವರುಗಳು ಅದೇ ಜಾಗದಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಇನ್ನೂ ಹಲವಾರು ಪ್ರಕರಣಗಳು ಸಂಡೂರು ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿರುವ ಕಾರಣ ಮತ್ತು ಮಾನ್ಯ ಉಚ್ಚ ನ್ಯಾಯಾಲಯ ಹಲವಾರು ಪ್ರಕರಣಗಳಲ್ಲಿ ತಡೆಯಾಜ್ಞೆ ನೀಡಿರುವ ಕಾರಣ ಈ ಮೇಲ್ಮನವಿಗಳಲ್ಲಿ ಕಾಲ ವಿಳಂಬ ಮನ್ನಾ ಮಾಡಿದರೆ ನನಗೇನು ತೊಂದರೆ ಆಗುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ಅಮಲ್ ಜಾರಿ ಕೇಸುಗಳ ಯಾವುದೇ ನಡವಳಿಕೆಗಳು ಅಲ್ಲಿ ವಾಸ ಇರುವ ಜನರ ಗಮನದಲ್ಲಿ

ಇಲ್ಲ ಎಂದರೆ ಸರಿಯಲ್ಲ. ನಾನು ಕೇವಲ ಮೆಲ್ಮನವಿದಾರರುಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳಲು ಬಂದಿದ್ದೇನೆ ಎಂದರೆ ಸರಿಯಲ್ಲ.

4 ಮತ್ತು 5 ನೇ ಎದುರುದಾರರ ಪರ ತಾಲ್ಲೂಕು ಕಚೇರಿಯ ಶಿರಸ್ತೇದಾರರು ಹಾಜರಿದ್ದಾರೆ. ಅವರು ಯಾವುದೇ ತಕರಾರು ಸಲ್ಲಿಸಿಲ್ಲ ಮತ್ತು ಅವರು ಮೇಲ್ಮನವಿದಾರರ ಪರ ಇರುತ್ತಾರೆ. ಆದ್ದರಿಂದ ಅವರ ಪಾಟೀ ಸವಾಲು ಇಲ್ಲ ಎಂದು ತಿಳಿಯಲಾಯಿತು.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ. ಸರಿ ಇದೆ,

**ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
ವಿಶೇಷ ನ್ಯಾಯಾಲಯ, ಬಳ್ಳಾರಿ.